**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ನಂಃ 24/2022**

| | | |
|---|---|---|
| ಸಾಕ್ಷಿದಾರರ ಹೆಸರು | - ವಿಜಯ.ಹೆಚ್. | ಪಿಡಬ್ಲೂ - 13 |
| ಗಂಡನ ಹೆಸರು | - ರವಿಕುಮಾರ | ಸಿಡಬ್ಲೂ - 24 |
| ವಯಸ್ಸು | - 40 ವರ್ಷ | |
| ಉದ್ಯೋಗ | - ಪಿ.ಡಿ.ಒ., ಹಿರೇಕೊಳಲೆ ಗ್ರಾಮ ಪಂಚಾಯ್ತಿ, | |
| ವಾಸ ಸ್ಥಳ | - ಚಿಕ್ಕಮಗಳೂರು | |

(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 24-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿಃ 24-09-2021 ರಿಂದ ಹಿರೇಕೊಳಲೆ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ

ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 29-11-2021 ರಂದು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕರು ನಮ್ಮ ಕಛೇರಿಗೆ ಮನವಿಯನ್ನು ಸಲ್ಲಿಸಿ ಸದರಿ ಪೊಲೀಸ್ ಠಾಣೆ ಮೊಕದ್ದಮೆ ಸಂಃ 352/2021 ಕ್ಕೆ ಸಂಬಂಧಿಸಿದಂತೆ ಕೃತ್ಯ ನಡೆದ ಸ್ಥಳವಾದ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಕಬ್ಬಿನಹಳ್ಳಿ ಗ್ರಾಮದ ಸರ್ವೆ ನಂಬರು 212/2 ರಲ್ಲಿರುವ ಪ್ರಾಸಾ.4 ರಮೇಶಗೌಡರವರಿಗೆ ಸೇರಿದ ಕಾಫಿ ಎಸ್ಟೇಟಿನಲ್ಲಿ ಕಟ್ಟಿಸಿರುವ ಕೂಲಿ ಲೈನ್ ಮನೆಗಳಿಗೆ ಸಂಬಂದಪಟ್ಟ ಅಸೆಸೆಮೆಂಟ್ ಮತ್ತು ದಾಖಲೆಯನ್ನು ನೀಡುವಂತೆ ಕೋರಿದ್ದರು. ಸದರಿ ಮನವಿಯನ್ನು ನಾನು ದಿಃ 14-12-2021 ರಂದು ಸ್ವೀಕರಿಸಿದ್ದೇನೆ. ಸದರಿ ಮನವಿಯನ್ನು ಮತ್ತು ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಮನವಿಯನ್ನು ನಿಪಿ.30 ಎಂದು ಸಾಕ್ಷಿಯ ಸಹಿಯನ್ನು ನಿಪಿ.30(ಎ) ಎಂದು ಗುರುತಿಸಲಾಯಿತು.

3. ನಮ್ಮ ಕಛೇರಿಯಲ್ಲಿದ್ದ ಸದರಿ ಸ್ಥಳಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿ ನೋಡಲಾಗಿ ಕಬ್ಬಿನಹಳ್ಳಿ ಕಾಫಿ ಎಸ್ಟೇಟಿನಲ್ಲಿ ಕಟ್ಟಿರುವ ಕೂಲಿ ಲೈನ್ ಮನೆಗಳು ಕೆ.ರಮೇಶ್ ಬಿನ್ ಕಲ್ಲೇಗೌಡ ಎಂಬುವವರ ಹೆಸರಿನಲ್ಲಿ ಆಸ್ತಿ ಸಂಖ್ಯೆ 82/85 ರಂತೆ ದಾಖಲಾಗಿರುವುದು ಕಂಡುಬಂತು. ಸದರಿ ಎಸ್ಟೇಟಿನಲ್ಲಿ ರಮೇಶ್ ರವರಿಗೆ ಸೇರಿದ ಒಂದು ಆರ್.ಸಿ.ಸಿ ಮನೆ ಒಂದು ಮಂಗಳೂರಿನ ಹೆಂಚಿನ ಗೋಡೌನ್ ಮತ್ತು ಕೂಲಿ ಲೈನ್

ಮನೆಗಳು ಇದ್ದು ಅವುಗಳಿಗೆ ಒಟ್ಟಾಗಿ ಆಸ್ತಿ ಸಂಖ್ಯೆ 82/85 ನ್ನು ನೀಡಲಾಗಿತ್ತು. ಆ ಬಗ್ಗೆ ನಾನು ಡಿಮ್ಯಾಂಡ್ ರಿಜಿಸ್ಟರ್ ಎಕ್ಸಟ್ರ್ಯಾಕ್ಟನ ದೃಢೀಕೃತ ಪ್ರತಿಯನ್ನು ಲಗತ್ತಿಸಿ ಅದೇ ದಿನ ಅಂದರೆ ದಿಃ 14-12-2021 ರಂದು ಪೊಲೀಸರಿಗೆ ವರದಿಯನ್ನು ನೀಡಿದ್ದೇನೆ. ಅವರು ಅದನ್ನು ದಿಃ 15-12-2021 ರಂದು ಸ್ವೀಕರಿಸಿದ್ದಾರೆ. ಸದರಿ ವರದಿಯನ್ನು ಮತ್ತು ಡಿಮ್ಯಾಂಡ್ ಡಿಮ್ಯಾಂಡ್ ರಿಜಿಸ್ಟರ್ ಎಕ್ಸಟ್ರ್ಯಾಕ್ಟನ ದೃಢೀಕೃತ ಪ್ರತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ವರದಿಯನ್ನು ಮತ್ತು ಡಿಮ್ಯಾಂಡ್ ರಿಜಿಸ್ಟರ್ ಎಕ್ಸಟ್ರ್ಯಾಕ್ಟನ ದೃಢೀಕೃತ ಪ್ರತಿಯನ್ನು ಮತ್ತು ಅವುಗಳಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ವರದಿಯನ್ನು ಮತ್ತು ಡಿಮ್ಯಾಂಡ್ ರಿಜಿಸ್ಟರ್ ಎಕ್ಸಟ್ರ್ಯಾಕ್ಟನ ದೃಢೀಕೃತ ಪ್ರತಿಯನ್ನು ಕ್ರಮವಾಗಿ ನಿಪಿ.31 ಮತ್ತು ಪಿ.32 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.31(ಎ) ಮತ್ತು ಪಿ.32(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್ ವಕೀಲರಿಂದಃ</u>

(ಈ ಹಂತದಲ್ಲಿ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ಕುರಿತು ಧ್ವನಿ ಕೇಳಿಸುತ್ತಿದೆಯೇ ಎಂದು ಕೇಳಿ, ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು).

4. ನೀವು ಹೇಳಿದಂತೆ ಯಾವುದೇ ಕಡತಗಳನ್ನು ಪರಿಶೀಲಿಸದೇ ಕೇವಲ ಪೊಲೀಸರು ಕೋರಿಕೆಯ ಮೇರೆಗೆ ನಿಪಿ.31 ಮತ್ತು ಪಿ.32 ರಂತೆ ದಾಖಲೆಗಳನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ನಿಪಿ.30 ಮನವಿ ನಮ್ಮ ಕಛೇರಿಯ ಟಪಾಲಿನಲ್ಲಿ ಸ್ವೀಕೃತಗೊಂಡಿರುತ್ತದೆ. ಅದನ್ನು ಯಾವ ಪೊಲೀಸರು ತಂದು ಅಲ್ಲಿಗೆ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ.31 ಮತ್ತು ಪಿ.32 ದಾಖಲೆಗಳನ್ನು ಪೊಲೀಸರು ನನ್ನಿಂದ ಸ್ವೀಕರಿಸಿದ್ದಾರೆ. ಅದನ್ನು ಸ್ವೀಕರಿಸಿದ ಪೊಲೀಸರು ಯಾರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ದಾಖಲೆಗಳನ್ನು ಪೊಲೀಸರಿಗೆ ನೀಡಿದ ಬಗ್ಗೆ ನಾನು ಹಿಂಬರಹವನ್ನು ಪಡೆದಿದ್ದೇನೆ. ಯಾರ ಹಿಂಬಹರವನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ಅದನ್ನು ಸ್ವೀಕರಿಸಿದ ಪೊಲೀಸರು ಸಹಿ ಮಾಡಿದ್ದಾರೆ, ಆದರೆ ಅವರ ಹೆಸರು ಬರೆದಿಲ್ಲ ಎನ್ನುತ್ತಾರೆ. ನೀವು ಹೇಳಿದಂತೆ ಹಿಂಬರಹವನ್ನು ಬರೆಯಲಾದ ಮೂಲ ದಾಖಲೆಯನ್ನು ನೀವು ಹಾಜರುಪಡಿಸಿಲ್ಲ ಎಂದರೆ ಸರಿ. ನೀವು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬರುವಾಗ ಎಲ್ಲಾ ಮೂಲ ದಾಖಲೆಗಳನ್ನು ತರಬೇಕಾಗುತ್ತದೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ